# ನಾಡಹಬ್ಬ ನವರಾತ್ರಿ

ಸರೋಜಮ್ಮ



ಮೈಸೂರು ಜನರಿಗೆ ನವರಾತ್ರಿ ಒಂದು ಹೆಮ್ಮೆಯ ಉತ್ಸವ. ಇತ್ತೀಚೆಗಷ್ಟೇ ಈ ವರ್ಷದ ನವರಾತ್ರಿ ಮುಗಿದಿದೆ. ಅದರ ಸವಿ ನೆನಪನ್ನು ಮಾಡಿಕೊಡುತ್ತಾರೆ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ನಿಕಟ ಭಕ್ತರಾದ ಶ್ರೀಮತಿ ಸರೋಜಮ್ಮ ಅವರು.

## ದಸರಾ

**ಆಶ್ವೀಜ** ಶುದ್ಧ ಪಾಡ್ಯದಿಂದ ದಶಮಿಯವರೆಗೆ ನಡೆಯುವ ಈ ಹಬ್ಬವನ್ನು ದಸರಾ ಎಂದೂ ಕರೆಯುತ್ತಾರೆ. ದಸರಾ ಪದವು ದಶಹರ ಎಂದರೆ ಹತ್ತು ದಿನಗಳು, ಎಂಬ ಪದದಿಂದ ಬಂದಿದೆ. ಈ ಹತ್ತು ದಿನಗಳಲ್ಲಿ ಮಹಾನವಮಿ ಮತ್ತು ವಿಜಯದಶಮಿ ಪ್ರಮುಖವಾದವು. ದಾನವರಿಗೂ ದೇವತೆಗಳಿಗೂ ನಡೆದ ಯುದ್ಧದಲ್ಲಿ ದೇವತೆಗಳಿಗುಂಟಾದ ವಿಜಯವನ್ನಾಚರಿಸುವ ಪದ್ಧತಿ ಬೆಳೆದು ಬಂದುದಾಗಿ ಪುರಾಣಗಳು ಸಾರುತ್ತವೆ. ರಾಮನು ಲಂಕೆಯ ಮೇಲೆ ದಂಡೆತ್ತಿಹೋಗಿ ರಾವಣನನ್ನು ಕೊಂದು ವಿಜಯವನ್ನು ಸಾಧಿಸಿದ ದಿನ ವಿಜಯದಶಮಿ. ಪಾಂಡವರು ಅಜ್ಞಾತವಾಸದ ನಂತರ ಶಮೀವೃಕ್ಷದ ಮೇಲೆ ಕಟ್ಟಿಟ್ಟಿದ್ದ ತಮ್ಮ ಶಸ್ತ್ರಾಸ್ತ್ರಗಳನ್ನು ವಿಜಯದಶಮಿಯ ದಿನ ಹೊರತೆಗೆದು ವಿಜಯೋತ್ಸವವನ್ನು ಆಚರಿಸಿದರೆಂಬ ಪ್ರತೀತಿಯಿದೆ. ಈ ಹಬ್ಬ ಬೇರೆ ಬೇರೆ ಹೆಸರಿನಲ್ಲಿ ದೇಶದ ವಿವಿಧೆಡೆಗಳಲ್ಲಿ ಆಚರಿಸಲ್ಪಡುತ್ತಿದೆ.


ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದಮೇಲೆ ಈ ಹಬ್ಬ ವಿಜೃಂಭಣೆಯಿಂದ ನಡೆಯುತ್ತಿದೆ. ದೀಕ್ಷೆಯನ್ನು ಪಡೆದ ಮಹಾರಾಜರು ನವರಾತ್ರಿಯ ಪ್ರತಿದಿನವೂ ಬನ್ನಿ ಮರವನ್ನು ಪೂಜಿಸುತ್ತಿದ್ದರು. ಸಂಜೆಯಾದಂತೆ ಅರಮನೆಯ ಸಭಾಂಗಣದಲ್ಲಿ ಒಡ್ಡೋಲಗ. ಸುತ್ತಲಿನ ರಾಜಪ್ರಮುಖರೂ, ಅಧಿಕಾರಿಗಳೂ ಆಹ್ವಾನಿತರಾಗಿ ಅರಮನೆಗೆ ಬಂದು ಕಪ್ಪ ಕಾಣಿಕೆಗಳನ್ನು ರಾಜರಿಗೆ ನೀಡಿ ಗೌರವಿಸುತ್ತಿದ್ದರು. ರಾಜರಿಂದಲೂ ಅವರವರ ಯೋಗ್ಯತಾನುಸಾರವಾಗಿ ಉಡುಗೊರೆ ಸಿಕ್ಕುತ್ತಿತ್ತು. ಸುತ್ತಲಿನ ರಾಷ್ಟ್ರಗಳ ಸೌಹಾರ್ದತೆಗಾಗಿ ಈ ಮಹಾ ರಾಜ್ಯೋತ್ಸವದ ಸಮ್ಮೇಳನ. ಅದನ್ನು ವೀಕ್ಷಿಸಲು ಸಾವಿರಾರು ಮಂದಿ ಪ್ರಜೆಗಳು ಅರಮನೆಯ ಮುಂದಿನ ಉದ್ಯಾನವನದಲ್ಲಿ ಸೇರುತ್ತಿದ್ದರು. ವಿಜಯ ನಗರ ಸಾಮ್ರಾಜ್ಯ ಅಳಿದಮೇಲೆ, ಅದರ ಅಧಿಕಾರದ ವ್ಯಾಪ್ತಿಗೆ ಒಳಪಟ್ಟಿದ್ದ ಮೈಸೂರು ಸಂಸ್ಥಾನದ ಅರಸರು ಈ ಉತ್ಸವವನ್ನು ಮುಂದುವರಿಸಿಕೊಂಡು ಬಂದರು.

## ಮೈಸೂರಿನಲ್ಲಿ ನವರಾತ್ರಿ

ಸಭಾಂಗಣದಲ್ಲಿ ಬೆಳಗುತ್ತಿದ್ದ ವಿದ್ಯುಚ್ಛಕ್ತಿಯ ಬೆಳಕಿನಲ್ಲಿ ಸಂಜೆ ಏಳು ಗಂಟೆಗೆ ಸರಿಯಾಗಿ ಮಂಗಳವಾದ್ಯ ಮೊಳಗುತ್ತಿರಲು, ವೈದಿಕರು ವೇದಘೋಷಗೈಯ್ಯುತ್ತಿರಲು, ಸ್ತುತಿ ವಾಚಕರು ಪರಾಕು ಹೇಳುತ್ತಿರಲು ಝಗಮಗಿಸುವ ವಸ್ತ್ರಾಭರಣಗಳಿಂದಲಂಕೃತರಾದ ರಾಜರು ಗಂಭೀರವಾಗಿ ನಡೆದು ಬಂದು ಸಿಂಹಾಸನಕ್ಕೆ ಮಣಿದು, ಸಿಂಹಾಸನವನ್ನೇರಿದೊಡನೆ ಝಗ್ಗೆಂದು ಇಡೀ ಅರಮನೆಯೆ ಬೆಳಗುವುದು ವಿದ್ಯುದ್ದೀಪಗಳ ಅಲಂಕಾರದಿಂದ. ಆ ಮುಹೂರ್ತಕ್ಕಾಗೇ ಕಾದು ನಿಂತಿದ್ದ ಪ್ರಜೆಗಳಿಂದ ಆನಂದದ ಉದ್ಗಾರ. ಮಕ್ಕಳಿಂದ ಕೇಕೆ. ಜನತೆಯ ಹರ್ಷೋದ್ಗಾರ ತಮ್ಮ ರಾಜರನ್ನು ಕಂಡ ಸಂತಸದಿಂದ. ಅರಮನೆಯ ಮುಂದೆ ಸಂಗೀತ, ಕುಸ್ತಿ, ಕತ್ತಿವರಸೆ ಇವಕ್ಕೂ ಪ್ರೋತ್ಸಾಹ ಸಿಕ್ಕಿ ಅದರಲ್ಲಿ ಭಾಗವಹಿಸುವವರಿಗೆ ಮರ್ಯಾದೆ ಸಿಕ್ಕುತ್ತಿತ್ತು.

ಒಂಭತ್ತನೆಯ ದಿನ ನವಮಿ. ಅಂದು ಅರಮನೆಯ ಮುಂದೆ ಮಹಾರಾಜರು ಪಟ್ಟದ ಕತ್ತಿ ಇನ್ನಿತರ ಶಸ್ತ್ರಾಸ್ತ್ರಗಳನ್ನೂ, ಪಟ್ಟದ ಆನೆ, ಪಟ್ಟದ ಕುದುರೆ, ಪಟ್ಟದ ಹಸು ಇವನ್ನೆಲ್ಲಾ ಪೂಜಿಸುತ್ತಿದ್ದರು. ಅದನ್ನು ನೋಡಲು ಪ್ರಜೆಗಳ ನೂಕುನುಗ್ಗಲು ಹೇಳಲಸಾಧ್ಯ. ಹತ್ತನೆಯ ದಿನ ವಿಜಯದಶಮಿ. ರಾಜರು ವಸ್ತ್ರಾಭರಣಗಳಿಂದಲೂ, ಝಗಮಗಿಸುವ ಉಡುಪುಗಳಿಂದಲೂ ಅಲಂಕೃತರಾಗಿ ಆನೆಯ ಮೇಲೆ ಚಿನ್ನದ ಅಂಬಾರಿಯಲ್ಲಿ ಕುಳಿತು ಬನ್ನಿ ಮಂಟಪಕ್ಕೆ ಮೆರವಣಿಗೆಯಲ್ಲಿ ಹೋಗುತ್ತಿದ್ದರು. ಅವರ ಸಕಲ ಪರಿವಾರವೂ ಇನ್ನಿತರ ವಾಹನಗಳಲ್ಲಿ ಅವರನ್ನು ಹಿಂಬಾಲಿಸುತ್ತಿತ್ತು. ಆನೆಯ ಮುಂದೆ ಸುಮಾರು ಒಂದು ಕಿಲೋಮೀಟರ್ ದೂರದವರೆಗೂ, ನಂದಿ ಕಂಬ, ಕೋಲಾಟ, ಜಾನಪದ ನೃತ್ಯ, ವಾದ್ಯಮೇಳ, ಸೈನಿಕರ ಕವಾಯಿತು, ಸ್ತಬ್ಧ ಚಿತ್ರಗಳ ಮೆರವಣಿಗೆಯನ್ನು ನೋಡಲು ಲಕ್ಷಾಂತರ ಜನರು ಧಾವಿಸಿ ಬರುತ್ತಿದ್ದರು.

ವಿಶ್ವದಲ್ಲೇ ಪ್ರಖ್ಯಾತವಾದ ಮೆರವಣಿಗೆಯಾಗಿತ್ತು ಇದು. ಹಿಂದೆ ಹೊರದೇಶದಿಂದಲೂ ಅತಿಥಿಗಳು ಬರುತ್ತಿದ್ದರು. ನಗರವೆಲ್ಲಾ ತಳಿರುತೋರಣಗಳಿಂದಲೂ, ರಂಗುರಂಗಿನ ವಿದ್ಯುದ್ದೀಪಗಳಿಂದಲೂ



ವಿಜಯದಶಮಿಯ ಮೆರವಣಿಗೆಯ ದೃಶ್ಯ

ಅಲಂಕೃತವಾಗಿ ಗಂಧರ್ವಲೋಕವೊಂದು ಸೃಷ್ಟಿಯಾದಂತಿತ್ತು. ಅಲ್ಲಲ್ಲಿ ಹಾರ, ತುರಾಯಿಗಳನ್ನು ನೀಡಿ ರಾಜರಿಗೆ ತಮ್ಮ ಶ್ರದ್ಧಾ-ಭಕ್ತಿಯನ್ನು ಸಲ್ಲಿಸುತ್ತಿತ್ತು ನಾಡಿನ ಜನತೆ. ರಾಜರು ತಮ್ಮ ಬಳಿ ಬಂದಾಗ 'ಮಹಾರಾಜರಿಗೆ ಜಯವಾಗಲಿ' 'ರಾಜರು ಚಿರಾಯುವಾಗಲಿ' ಎಂಬ ಕೂಗು ಮೊಳಗುತ್ತಿತ್ತು ನಾಡಿನ ಜನತೆಯಿಂದ. ತಮ್ಮ ಮುಗ್ಧ ಜನತೆಯ ಪ್ರೀತಿಯನ್ನು ಕಂಡ ರಾಜರು ಮುಗುಳ್ನಕ್ಕು ಕೈಗಳನ್ನು ಜೋಡಿಸಿ ವಂದಿಸುತ್ತಿದ್ದರು ಇಕ್ಕೆಲ್ಲಗಳನ್ನೂ ನೋಡುತ್ತಾ. ಬನ್ನಿ ಮಂಟಪವನ್ನು ಸೇರಿದ ಮೇಲೆ ವಿಶ್ರಮಿಸಿ, ಶಮೀ ವೃಕ್ಷವನ್ನು ಪೂಜಿಸುತ್ತಿದ್ದರು. ಅಲ್ಲಿಯೂ ವಿಧ ವಿಧವಾದ ಪಂಜಿನಾಟ ನಡೆಯುತ್ತಿತ್ತು. ಇಂದು ನಮ್ಮ ನಾಡು ರಾಜರನ್ನು ಕಳೆದುಕೊಂಡಿದೆ. ಗತ ವೈಭವವನ್ನು ನೆನೆದು ಹಿರಿಯ ಮಂದಿಯ ಮನ ಮಿಡುಕುತ್ತಿದೆ. ರಾಜರಿಲ್ಲದ ನಾಡಿನಲ್ಲಿ ಈಗ ರಾಜರ ಬದಲು ತಾಯಿ ಭುವನೇಶ್ವರಿಯನ್ನಿಟ್ಟು ಮೆರವಣಿಗೆ ನಡೆಯುತ್ತಿದೆ.

## ನವರಾತ್ರಿಯ ವೈಶಿಷ್ಟ್ಯ

ಭಾರತದ ಸಂಸ್ಕೃತಿಯಲ್ಲಿ ನವರಾತ್ರಿಯು ಅತ್ಯಂತ ಪ್ರಮುಖವಾದದ್ದು. ಇದರ ಹಿನ್ನೆಲೆ ಬಹುಸೊಗಸಾಗಿದೆ. ನವರಾತ್ರಿ ಒಂಭತ್ತು ದಿನಗಳ ಹಬ್ಬ. ಮನೆಗಳಲ್ಲಿ ಬೊಂಬೆ ಕೂರಿಸುವುದು, ಹಾಡು, ಕುಣಿತಗಳು, ಅಕ್ಕಪಕ್ಕದವರನ್ನು ಕರೆದು ಪ್ರೀತಿಯಿಂದ ಮಾತುಕತೆ ಇತ್ಯಾದಿಗಳು ನಡೆಯುತ್ತವೆ. ರಾಮಾಯಣ ಮತ್ತು ದೇವೀ ಮಹಾತ್ಮ್ಯೆಯ ಪಾರಾಯಣವನ್ನೂ ಮಾಡುವರು. ಒಂಭತ್ತು ದಿನ ರಾಕ್ಷಸರೊಡನೆ ದೇವಿಯ ಯುದ್ಧ ನಡೆದ ಮೇಲೆ ಹತ್ತನೇ ದಿನ ವಿಜಯ. ಪುರಾಣದ ಪ್ರಕಾರ ನಾಲ್ಕು ದೇವಿಯರು, ಜ್ಯೇಷ್ಠಾ (ಮೂದೇವಿ-ಮುತ್ತಾದೇವಿ) ಲಯಕ್ಕೆ ಕಾರಣಳಾದವಳು, ದುರ್ಗೆ ರಕ್ಷಣೆಗೆ ಕಾರಣಳಾದವಳು, ಲಕ್ಷ್ಮಿ ಸಂಪತ್ತನ್ನು ನೀಡುವವಳು, ಸರಸ್ವತಿ ಜ್ಞಾನದಾತ್ರಿ. ನಾಲ್ಕು ಜನರಿಗೂ ಮೂರು ಮೂರು ದಿವಸ ಹಬ್ಬವಿತ್ತು. ನಂತರ ಜ್ಯೇಷ್ಠಾದೇವಿ ತಿರಸ್ಕೃತಳಾದಳು ಕೆಟ್ಟ ಗುಣಗಳಿರುವುದರಿಂದ. ನಂತರ ಹಬ್ಬ ಒಂಭತ್ತು ದಿನಕ್ಕೆ ಇಳಿಯಿತು. ನಮ್ಮ ಸಂಸ್ಕೃತಿಯಲ್ಲಿಯೂ, ಪುರಾಣದಲ್ಲಿಯೂ ಹತ್ತನೆಯ ದಿನ ಬಹು ಮಹತ್ವದ ದಿನ. ಈ ಹತ್ತು ದಿನಗಳೂ ಪವಿತ್ರ ದಿನಗಳು. ದೇವಿ ರಾಕ್ಷಸರ ಯುದ್ಧದಲ್ಲಿ ಸಕಲ ದೇವತೆಗಳೂ ತಮ್ಮ ಶಕ್ತಿಯನ್ನು ದೇವಿಗೆ ಕೊಟ್ಟಿದ್ದುದರಿಂದ ಅವರೆಲ್ಲಾ ಜಡವಾಗಿದ್ದರು. ಅದರ ಸಂಕೇತವೇ ಮನೆಗಳಲ್ಲಿ ಬೊಂಬೆಗಳನ್ನಿಟ್ಟು ಪೂಜಿಸುವುದು. ಹತ್ತನೆಯ ದಿನ ವಿಜಯ.

ತಾಯಿ ದುರ್ಗೆ ಮಹಿಷಾಸುರನನ್ನು ಮೈಸೂರಿನಲ್ಲಿ ಸಂಹರಿಸಿದುದರಿಂದ ಈ ಊರಿಗೆ ಮಹಿಷೂರು ಅಥವಾ ಮೈಸೂರು ಎನ್ನುವರು. ಮೈಸೂರಿನಿಂದ ನಂಜನಗೂಡಿಗೆ ಹೋಗುವ ಹಾದಿಯಲ್ಲಿ ಎಡಗಡೆಗೆ ಒಳಭಾಗದಲ್ಲಿ ಮೂರು ನಾಲ್ಕು ಕಿ.ಮೀ. ದೂರದಲ್ಲಿ ಉತ್ತನಹಳ್ಳಿ ಎಂಬ ಹಳ್ಳಿಯಿದೆ. ಅಲ್ಲಿ ಜ್ವಾಲಾಮಾಲಿನಿ ತ್ರಿಪುರಸುಂದರಿ ಅಮ್ಮನವರ ದೇವಾಲಯವೂ ಶಿವನ ದೇವಾಲಯವೂ ಇವೆ. ಈ ತಾಯಿಯ ನಾಲಿಗೆ ಒಂದು ಗೇಣಿನಷ್ಟು ಮುಂದೆ ಚಾಚಿದೆ. ಚಾಮುಂಡಿ ರಕ್ತಬೀಜಾಸುರನನ್ನು ಇಲ್ಲಿಯೇ ಸಂಹರಿಸಿದುದರಿಂದ ಇಲ್ಲಿ ಅವಳ ದೇವಾಲಯ ಎನ್ನುವರು.

## ಚಾಮುಂಡಿ ರಥೋತ್ಸವ

ವಿಜಯ ದಶಮಿ ಮುಗಿದ ನಂತರ ನಾಡಿನ ರಾಜರ ನಕ್ಷತ್ರಕ್ಕೆ ಅನುಗುಣವಾಗಿ ಚಾಮುಂಡಿ ರಥೋತ್ಸವವು ನಡೆಯುವುದು. ನನಗೂ ಒಮ್ಮೆ ಆ ರಥೋತ್ಸವವನ್ನು ನೋಡುವ ಸೌಭಾಗ್ಯ ಒದಗಿತ್ತು. ಬೆಳಗಿನ ಮೂರು ಗಂಟೆಗೆ ಎದ್ದು ಸ್ನಾನಾದಿಗಳನ್ನು ಮುಗಿಸಿ ಸಪ್ತಶತಿಯನ್ನು ಪಠಿಸಿ ಬಸ್ಸು ನಿಲ್ದಾಣಕ್ಕೆ ಬಂದೆ. ಐದು ಗಂಟೆಯಿಂದಲೇ ಬಸ್ಸುಗಳು ಹೋಗುತ್ತಿದ್ದವು. ಬಸ್ಸು ಬೆಟ್ಟವನ್ನು ಏರಲು ಉಪಕ್ರಮಿಸಿತು. ಎಂತಹ ಪವಿತ್ರ ಮುಂಜಾನೆ. ಹಕ್ಕಿಗಳು ಚಿಲಿಪಿಲಿ ಗುಟ್ಟುತ್ತಾ ಗಾನ ಗೈಯುತ್ತಿರಲು, ಮುಗಿಲೇ ಧೂಪವಾಗಿ ತಾಯಿ ಚಾಮುಂಡಿಗೆ ಧೂಪದಾರತಿಯನ್ನೆತ್ತುತ್ತಿರುವಾಗ ಝಗ್ಗೆಂದು ಮಿಂಚು ಹೊಡೆದಂತಾಯ್ತು. ವಿದ್ಯುದ್ದೀಪಗಳ ಮಡಿಲಲ್ಲಿ ಪವಡಿಸಿದ್ದ ನಗರ ನಕ್ಷತ್ರಲೋಕವೇ ಭುವಿಗಿಳಿದು ಬಂದಂತಿತ್ತು. ಓ ತಾಯಿ, ಎಂತಹ ಲಾವಣ್ಯ ನಿನ್ನದು. ಪ್ರಕೃತಿ ಮಾತೆ ನಿನ್ನ ಮಹಿಮೆಗೆ, ನಿನ್ನ ಪಾದಾರವಿಂದಕ್ಕೆ ನಮೋ ನಮೋ ಎಂದಿತು ಮನ. ದೇವಾಲಯ ಬಂದಿತು. ನಿಃಶಬ್ದವಾಗಿತ್ತು. ದೇವಾಲಯದ ಆವರಣವನ್ನೆಲ್ಲಾ ಬಣ್ಣ ಬಣ್ಣದ ಹೂಮಾಲೆಗಳಿಂದ ಅಲಂಕರಿಸಿದ್ದರು. ಹೊಸ ಸೀರೆಯನ್ನುಟ್ಟು ವಜ್ರಾಭರಣಗಳಿಂದಲೂ ಹೂಮಾಲೆಗಳಿಂದಲೂ ಅಲಂಕೃತಳಾಗಿ ಮಂದಸ್ಮಿತಳಾಗಿ ಕುಳಿತಿದ್ದಳು ತಾಯಿ ಚಾಮುಂಡಿ. ಸರ್ವಾಭರಣಗಳಿಂದಲಂಕೃತಳಾದ ಸರ್ವಮಂಗಳೆಯನ್ನು

ಮನದಣಿಯೆ ನೋಡಿದೆವು. ಮನ ಪ್ರಫುಲ್ಲವಾಗಿತ್ತು. ಮಲ್ಲಿಗೆ, ಸೇವಂತಿಗೆಯ ಪರಿಮಳ ಮುದವೀಯುತ್ತಿದ್ದವು. ನೀನೇ ಧನ್ಯೆ, ನೀನೇ ಧನ್ಯೆ ಎಂದುಸಿರುತ್ತಿತ್ತು ಕುಳಿರ್ಗಾಳಿ.

ಅಂದು ರಥೋತ್ಸವ ಮುಗಿಯುವವರೆಗೂ ಅರ್ಚನೆಯಿಲ್ಲ. ಆರತಿ ಮತ್ತು ತೀರ್ಥಪ್ರಸಾದ ತೆಗೆದುಕೊಂಡು ರಥದ ಬಳಿಗೆ ಬಂದೆವು. ಇನ್ನು ಕೆಲವೇ ನಿಮಿಷಗಳಲ್ಲಿ ಉತ್ಸವಮೂರ್ತಿಯನ್ನು ರಥದ ಮೇಲಿಡುವರು. ಉತ್ಸವ ಮೂರ್ತಿ ಬರುತ್ತಲಿದೆ ಎಂದರು. ನೂಕುನುಗ್ಗಲು ಹೆಚ್ಚಾಯಿತು. ನಮಗೂ ಒಂದು ಪ್ರಶಸ್ತ ಜಾಗ ದೊರೆಯಿತು. ಉತ್ಸವಮೂರ್ತಿ ಬಂದಿತು. ವೇದಪಠಣ ಕಿವಿಗಿಂಪಾಗಿತ್ತು. ಮಂಗಳ ವಾದ್ಯ ಮೊಳಗುತ್ತಿತ್ತು. ಉತ್ಸವ ಮೂರ್ತಿಯನ್ನು ರಥದ ಮೇಲಿಟ್ಟೊಡನೆ ಘಂಟೆ, ಜಾಗಟೆ, ಶಂಖಗಳ ನಿನಾದ, ನಾದಸ್ವರಗಳ ಶಬ್ದಕ್ಕೆ ಇನ್ನೂ ಬೆಚ್ಚಗೆ ಮಲಗಿದ್ದ ಹಕ್ಕಿಗಳು ಬೆಚ್ಚಿದಂತೆ, ಏನಿದೇನಿದು ಎಂದು ಆಶ್ಚರ್ಯಪಡುವಂತೆ ಒಟ್ಟಾಗಿ ಹಾರಿ ರಥದ ಸುತ್ತ ಸುಳಿದು ತಾಯಿ ಚಾಮುಂಡಿಗೆ ಮಾಲೆ ಹಾಕುವಂತೆ ಮಾಲೆ ಮಾಲೆಯಾಗಿ ಹಾರಿಹೋದುದು ನಯನಮನೋಹರವಾದ ದೃಶ್ಯ.

ತೇರಿನ ಪರದೆಯನ್ನು ತೆಗೆದರು ಅರ್ಚಕರು. ಆ ಎತ್ತರದ ರಥದಲ್ಲಿ ದೇವಿಯನ್ನು ಕಂಡೊಡನೆ ಜಯಘೋಷ ಮುಗಿಲು ಮುಟ್ಟಿತು: 'ಚಾಮುಂಡಿಗೆ ಜೈ, ಚಂಡಿಗೆ ಜೈ, ಕಾಳಿಗೆ ಜೈ, ದುರ್ಗೆಗೆ ಜೈ, ಬ್ರಹ್ಮಾಣಿಗೆ ಜೈ, ವೈಷ್ಣವಿಗೆ ಜೈ, ವಾರಾಹಿಗೆ ಜೈ, ಐಂದ್ರಿಗೆ ಜೈ, ಕೌಮಾರಿಗೆ ಜೈ, ನಾರಸಿಂಹಿಗೆ ಜೈ.' ಆರತಿಯೂ ಆಯಿತು. ಮನವೂ ತುಂಬಿತು. ರಥ ಎಳೆಯಲುಪಕ್ರಮಿಸಿದರು. ನಾವೂ ಮತ್ತೊಮ್ಮೆ ಕಣ್ತುಂಬಾ ಅವಳನ್ನು ನೋಡಿ, ಮನದಲ್ಲಿ ಅವಳ ಮಂಗಳ ರೂಪವನ್ನು ಧರಿಸಿ ತುಂಬಿದ ಆನಂದದಿಂದ ಹಿಂತಿರುಗಿದೆವು.

### ತೆಪ್ಪೋತ್ಸವ

ವಿಜಯದಶಮಿಯ ನಂತರ ಬರುವ ಹುಣ್ಣಿಮೆಯಂದು ತೆಪ್ಪೋತ್ಸವ. ತೆಪ್ಪೋತ್ಸವ ನಡೆಯುವುದು ಸಂಜೆಯ ವೇಳೆ, ದೇವೀಕೆರೆಯಲ್ಲಿ. ಚಟುವಟಿಕೆಯಿಂದ ತುಂಬಿ ತುಳುಕುತ್ತಿತ್ತು ಮೈಸೂರು. ಎಲ್ಲೆಲ್ಲಿಯೂ ದೀಪಗಳ ಮಾಲೆಗಳು, ದಸರೆಗಾಗಿ ಶೃಂಗರಿಸಿಕೊಂಡ ನಗರ ಇನ್ನೂ ವೈಭವದಿಂದ ಮೆರೆಯುತ್ತಿತ್ತು. ತೆಪ್ಪೋತ್ಸವ ಮುಗಿದರೆ ದಸರಾ ಮುಗಿದಂತೆ.

ತಾಯಿ ಚಾಮುಂಡಿಯ ಉತ್ಸವಮೂರ್ತಿಯನ್ನು ಶೃಂಗರಿಸಿ ಮಂಗಳ ವಾದ್ಯಗಳೊಡನೆ ದೇವಿಕೆರೆಯ ಬಳಿಗೆ ಬೆಳ್ಳಿಯ ಪಲ್ಲಕ್ಕಿಯಲ್ಲಿ ಹೊತ್ತು ತರುವರು. ಅಲ್ಲಿ ವೇದ ಘೋಷದೊಡನೆ ಅಲಂಕರಿಸಿದ ತೆಪ್ಪದಲ್ಲಿ ದೇವಿಯನ್ನು ಕೂರಿಸುವರು. ಸುತ್ತಲೂ ಅರ್ಚಕರು ನಿಂತಿರುವರು ಮಂತ್ರಪುಷ್ಪವನ್ನುಚ್ಚರಿಸುತ್ತಾ. ನಿಯಮಿತ ಸುಮುಹೂರ್ತದಲ್ಲಿ ವಾದ್ಯಗಳು ಭೋರ್ಗರೆಯುತ್ತಿರುವಾಗ ಗಂಭೀರವಾದ ವೇದಘೋಷದೊಡನೆ ತೆಪ್ಪ ಮೆಲ್ಲ ಮೆಲ್ಲನೆ ಚಲಿಸಲು ಆರಂಭಿಸುವ ವೇಳೆಗೆ ಸರಿಯಾಗಿ ತೋಪು ಮೊಳಗುವುದು. ರಂಗುರಂಗಿನ ವಿದ್ಯುದ್ದೀಪಗಳಿಂದಲೂ, ವಿವಿಧ ಪುಷ್ಪ ಮಾಲೆಗಳಿಂದಲೂ ಅಲಂಕೃತಳಾದ ತಾಯಿ ಚಾಮುಂಡಿ ಸರ್ವಾಭರಣಗಳನ್ನು ತೊಟ್ಟು ತೇಲಿ ಬರುತ್ತಿದ್ದರೆ ಮೈ ನವಿರೇಳುವುದು. ಮನ ಮುಗ್ಧವಾಗಿ ಅಮ್ಮಾ, ಅಮ್ಮಾ ಎಂದು ಜಪಿಸುವುದು. ನಮ್ಮ ಮುಂದೆ ಕೆಲ ಅಧಿಕಾರಿಗಳಿದ್ದುದರಿಂದ ಒಂದೆರಡು ನಿಮಿಷ ತೆಪ್ಪವನ್ನು ಅಲ್ಲಿಯೇ ನಿಲ್ಲಿಸಿ ಮಂಗಳಾರತಿ ಮಾಡಿದರು. ಕಣ್ತುಂಬ ನೋಡಿದೆವು ಆ ದಿವ್ಯ ಮೂರ್ತಿಯನ್ನು. ತುಂಬಿದ ಮನ ತಾಯಿಯನ್ನು ಸ್ತುತಿಸಿತು:

ಶ್ರೀ ಸ್ವಯಂ ಸರ್ವ ತೀರ್ಥಾತ್ಮಿಕೇ, ಸರ್ವ ಮಂತ್ರಾತ್ಮಿಕೇ,
ಸರ್ವ ತಂತ್ರಾತ್ಮಿಕೇ, ಸರ್ವ ಮುದ್ರಾತ್ಮಿಕೇ,
ಸರ್ವ ಪೀಠಾತ್ಮಿಕೇ, ಸರ್ವ ಶಕ್ತ್ಯಾತ್ಮಿಕೇ,
ಸರ್ವ ಚಕ್ರಾತ್ಮಿಕೇ, ಸರ್ವ ವರ್ಣಾತ್ಮಿಕೇ,
ಸರ್ವ ವಿದ್ಯಾತ್ಮಿಕೇ, ಸರ್ವ ಯೋಗಾತ್ಮಿಕೇ,
ಸರ್ವ ನಾದಾತ್ಮಿಕೇ, ಸರ್ವ ಶಬ್ದಾತ್ಮಿಕೇ,
ಸರ್ವ ವಿಶ್ವಾತ್ಮಿಕೇ, ಸರ್ವ ದೀಕ್ಷಾತ್ಮಿಕೇ,
ಸರ್ವ ಸರ್ವಾತ್ಮಿಕೇ, ಸರ್ವಗೇ ಹೇ ಜಗನ್ಮಾತೃಕೇ,
ಪಾಹಿ ಮಾಂ ಪಾಹಿ ಮಾಂ ಪಾಹಿ ಮಾಂ
ತುಭ್ಯಂ ನಮೋ ದೇವಿ, ತುಭ್ಯಂ ನಮೋ ದೇವಿ ತುಭ್ಯಂ ನಮಃ |

ಈ ಸೊಗಸನ್ನು ಸವಿಯಲು ಚಂದ್ರನಿಗೂ, ಮೋಡಗಳಿಗೂ ಕಣ್ಣುಮುಚ್ಚಾಲೆ. ಅವನು ಇಣುಕಲು ಸಾಹಸ ಪಡುವುದು; ಮೋಡಗಳು ಸುತ್ತ ಮುತ್ತಲಿನಿಂದ ಅವನನ್ನು ಆವರಿಸಲು ಯತ್ನಿಸುವುವು! ಚಂದ್ರ ಬಿಟ್ಟಾನೆಯೇ, ಎಡ ಬಲಗಳಿಂದ ಮೋಡಗಳನ್ನು ತಳ್ಳಿಹಾಕಿ ನಿಂತು ನೋಡಿಯೇ ನೋಡಿದ. ತೆಪ್ಪ ಮೂರು ಸುತ್ತು ಬಂದಿತು. ಮತ್ತೆ ಮಂಗಳಾತಿ. ಮಂಗಳ ವಾದ್ಯಗಳೊಡನೆ ದೇವಿಯನ್ನು ಪಲ್ಲಕ್ಕಿಯಲ್ಲಿ ದೇವಾಲಯಕ್ಕೆ ಕೊಂಡೊಯ್ದರು. ನಾವೂ ಹೊರಟೆವು ತುಂಬಿದ ಆನಂದದಿಂದ. ಯಾರ ಬಾಯಲ್ಲೂ ಮಾತೇ ಇಲ್ಲ. ಎಲ್ಲರೂ ಮೌನವಾಗಿ ಆ ಉತ್ಸವದ ಸೊಬಗನ್ನೆ ಸವಿಯುತ್ತಿದ್ದೆವು. ಅರ್ಧ ಬೆಟ್ಟ ಇಳಿಯುವ ವೇಳೆಗೆ ಇಡೀ ಮೈಸೂರೇ ವಿದ್ಯುಚ್ಛಕ್ತಿಯ ಬೆಳಕಿನಲ್ಲಿ, ನಕ್ಷತ್ರ ಲೋಕವೇ ಭುವಿಗೆ ಇಳಿದು ಬಂದಂತೆ ಮಿನುಗುತ್ತಿರುವುದು ಕಾಣಿಸಿತು. ಶ್ರೀರಾಮಕೃಷ್ಣ ವಚನವೇದದ,

ಮಿರುಗುತಿದೆ ನಿನ್ನ ರೂಪ
ರಾಶಿ ನಿಬಿಡಾಂಧಕಾರದಲ್ಲಿ
ನಿನ್ನನದರಿಂದಲೇ ನೆನೆವರಾ
ಯೋಗಿಗಳು ಗಿರಿಗುಹೆಗಳಲ್ಲಿ

ಎಂಬ ಹಾಡು ನೆನಪಾಯ್ತು. ಸ್ವಲ್ಪ ಹೊತ್ತು ವಾಹನವನ್ನು ನಿಲ್ಲಿಸಿ ಆ ಸೊಗಸನ್ನು ಸವಿದೆವು, ಮತ್ತೆ ಹೊರಟೆವು.

ಬೆಟ್ಟ ಇಳಿಯುತ್ತಿದ್ದಂತೆ 'ನಿತ್ಯೋತ್ಸವ, ತಾಯೇ, ನಿನಗೆ ನಿತ್ಯೋತ್ಸವ' ಎಂದು ಹಾಡು ನನ್ನ ಕಿವಿಗೆ ಬಿತ್ತು. ಮೈ ನವಿರೆದ್ದಿತು. ಎದೆ ಝಲ್ಲೆಂದಿತು. ಮನ

ನಮೋ ದೇವ್ಯೈ ಮಹಾ ದೇವ್ಯೈ
ಶಿವಾಯೈ ಸತತಂ ನಮಃ ಎಂದಿತು.